ಮಾಡಿಬಿಟ್ಟಿದೆ. ಸ್ವತಃ ತನ್ನನ್ನು ತಿದ್ದಿಕೊಂಡಿರುವುದೇ ಅಲ್ಲದೆ ಸಿಬ್ಬಂದಿಗಳನ್ನೂ ಎಲ್ಲೆಂದರಲ್ಲಿ ಕೂರಿಸಿಕೊಂಡು ಸಲ್ಯೂಟು ಹೇಗೆ ಹೊಡೆಯಬೇಕು, ಯಾವಾಗ ಹೊಡೆಯಬೇಕು ಮತ್ತು ಯಾಕಾಗಿ ಹೊಡೆಯಬೇಕು? ಅನ್ನುವ ಬಗ್ಗೆ ಉಚಿತವಾದ ತರಬೇತಿ ಕೊಡಲಾರಂಭಿಸಿದ್ದಾನೆಂದರೆ... ಸಾಹೇಬರ ಪ್ರಭಾವ ಹೇಗಿರಬೇಡ?

ಠಾಣೆಯಲ್ಲೊಂದು ಸರ್ಕಾರಿ ಬುಲೆಟ್ಟು ಇತ್ತು. ಆಂಟಿಕ್ ಪೀಸಿನಷ್ಟೇ ಜಾಗ್ರತೆಯಿಂದ ಸಾಹೇಬರು ಅದನ್ನು ನೋಡಿಕೊಳ್ಳುತ್ತಿದ್ದರು. ಆಗಾಗ ಸರ್ವೀಸು ಮಾಡಿಸುತ್ತಾ ಅದನ್ನು ಸುಸ್ಥಿತಿಯಲ್ಲಿಟ್ಟಿರುತ್ತಿದ್ದರು. ಯಾವಾಗಾದರೊಮ್ಮೆ ಹಳ್ಳಿ ವಿಸಿಟ್ಟುಗಳಿಗೆ, ಜನಸಂಪರ್ಕ ಸಭೆಗಳಿಗೆ ಅದನ್ನು ಒಯ್ಯುತ್ತಿದ್ದರು. ಆ ದೃಶ್ಯ ವೈಭವವನ್ನು ಕಣ್ತುಂಬಿಕೊಳ್ಳಲೆಂದೇ ಒಂದು ಸಮೂಹ ಕಾಯ್ದುಕೊಂಡು ಕುಳಿತಿರುತ್ತಿತ್ತು. ಅವರು ಬುಲೆಟ್ಟು ಏರಿ ಹೊರಡುತ್ತಿದ್ದಂತೆಯೇ ಊರ ಸರಹದ್ದುಗಳಲ್ಲಿ ಎಲೆ ಹರಡಿಕೊಂಡು ಕುಳಿತ ಜೂಜುಕೋರರಿಗೆ, ಪಟ್ಟಣದೊಳಗಿನ ಪಾರಿವಾಳಗಳನ್ನು ಹಾರಿಸಿಕೊಂಡು ಹೋಗಿ ಊರ ಹೊರಗಿನ ಏಕಾಂತಕ್ಕೆ ಶರಣಾಗಿರುವ ರಸಿಕ ಶಿಖಾಮಣಿಗಳಿಗೆ 'ಸಾಹೇಬ ಆನ್ ರೌಂಡ್ಸ್' ಎಂಬ ಮೆಸೇಜು ಹೋಗುತ್ತಿತ್ತು. ಅಂತೆಯೇ ಕ್ಲುಪ್ತ ಸಮಯದಲ್ಲಿ ಅವರೆಲ್ಲರೂ ಅಲ್ಲಿಂದ ಚದುರಿ ಸೇಫಾದ ಜಾಗಗಳಿಗೆ ತಲುಪಿಕೊಳ್ಳುತ್ತಿದ್ದರು. ಅಪ್ಪಿತಪ್ಪಿ ಸಾಹೇಬರ ಕೈಗೆ ಸಿಕ್ಕಿಬೀಳುವುದೂ, ತದ ನಂತರ ಠಾಣೆಯಲ್ಲಿ ಅವರ ರುದ್ರ ನರ್ತನವನ್ನು ನೋಡುವುದೂ... ಯಾರಿಗೆ ಬೇಕು?

ಚಿತ್ತರಂಜನ ಸಾಹೇಬರದೊಂದು ಖಯಾಲಿಯಿತ್ತು. ಖಾಲಿ ರಸ್ತೆ ಕಂಡರೆ ಸಾಕು, ಆ ಬಡಪಾಯಿ ಬುಲೆಟ್ಟನ್ನು ಫಾರ್ಮುಲಾ ಒನ್ ಚಾಲಕನಂತೆ ಚಲಾಯಿಸುತ್ತಾ ಹಳ್ಳಿಗಾಡು ರಸ್ತೆಯಲ್ಲಿ ಓಡಾಡುವ ವಾಹನಗಳನ್ನು ಮತ್ತು ಸವಾರರನ್ನು ತಬ್ಬಿಬ್ಬು ಮಾಡುತ್ತಿದ್ದರು. ರಸ್ತೆ ಪಕ್ಕದ ಹೊಲ ಗದ್ದೆಗಳ ಬದುವಿನಲ್ಲಿ ಮೇಯುತ್ತಾ ನಿಂತ ಎಮ್ಮೆ ಹಸುಕರುಗಳಂತಹ ಸಾಧು ಪ್ರಾಣಿಗಳು ಆ ಬುಲೆಟ್ಟಿನಿಂದ ಹೊರಡುತ್ತಿದ್ದ ಗುಡುಗು ಸಮಾನ ಸದ್ದಿಗೆ ಬೆದರಿ ಬಾಲವನ್ನು ಬಡಿಯುತ್ತಾ ಗಾಡಿಯು ಮರೆಯಾಗುವವರೆಗೂ ಕಣ್ಣು ಹಾಯಿಸುತ್ತಾ ನಿಂತುಬಿಡುತ್ತಿದ್ದವು.

ಸಾಮಾನ್ಯವಾಗಿ ನಾನು ಅಥವಾ ಮನೋಜನಿಲ್ಲದೆ ಸಾಹೇಬರ ಬುಲೆಟ್ಟು ಸವಾರಿ ಹೊರಡುತ್ತಿರಲಿಲ್ಲ. ಅಂಥ ಸಮಯದಲ್ಲಿ ಅವರ ದೈತ್ಯಾಕೃತಿಯ ಹಿಂದೆ ಮುದುಡಿ ಕುಳಿತಿರುತ್ತಿದ್ದ ನಮಗೆ ಮುಂದಿನ ರಸ್ತೆ ಕಾಣುವುದು ಸಾಧ್ಯವಿರುತ್ತಿರಲಿಲ್ಲ. ಕೆಲವೊಮ್ಮೆ ಅವರು ಸಾಗುತ್ತಿದ್ದ ವೇಗಕ್ಕೆ ನಮ್ಮ ತಲೆಯ ಮೇಲೆ ಹಾಕಿಕೊಂಡಿರುತ್ತಿದ್ದ ಕ್ಯಾಪ್ ಎಲ್ಲಿ ಹಾರಿಹೋಗುತ್ತದೋ ಎಂಬ ದಿಗಿಲಿನಲ್ಲಿ ಒಂದು ಕೈನಲ್ಲಿ ಕ್ಯಾಪೂ ಇನ್ನೊಂದು ಕೈನಲ್ಲಿ ಬುಲೆಟ್ಟಿನ ಹಿಂಭಾಗದ ಹ್ಯಾಂಡಲೂ ಹಿಡಿದು ಗಟ್ಟಿಯಾಗಿ ಕುಳಿತಿರುತ್ತಿದ್ದೆವು. ಎಷ್ಟೇ ಹುಷಾರಾಗಿ ಕುಳಿತರೂ ಅದೊಂದು ದಿನ ನನ್ನ ತಲೆಯ ಮೇಲಿದ್ದ ಕ್ಯಾಪನ್ನು ರಪ್ಪನೇ ಬೀಸಿದ ದುಷ್ಟ ಬಿರುಗಾಳಿಯು ಎಗರಿಸಿಕೊಂಡು ಹೋಗಿಯೇ ಬಿಟ್ಟಿತು. ಸಾಹೇಬರು ಏನೋ ತರಾತುರಿಯಲ್ಲಿದ್ದಾರೇನೋ ಎಂದೆಣಿಸಿದ ನಾನು ಅಂಜಿ ಅದನ್ನು ಹೇಳುವ ಧೈರ್ಯ ಮಾಡಲಿಲ್ಲ. ಅದೃಷ್ಟಕ್ಕೆ ಅನತಿ ದೂರದಲ್ಲೇ ಯಾರೋ ಪರಿಚಿತರೊಬ್ಬರು ರಸ್ತೆಯಲ್ಲಿ ಸಿಕ್ಕಿ ಸಾಹೇಬರಿಗೆ ಸಲಾಮು ಮಾಡಲಾಗಿ 'ರೇಸು ಗುರ್‍ರಂ'ನಂತೆ ದೌಡಾಯಿಸುತ್ತಿದ್ದ ಬುಲೆಟ್ಟು ಕ್ಷಣಕಾಲ ನಿಂತಿತು. ಅವರೊಂದಿಗೆ ಮಾತನಾಡುತ್ತಾ ಹಾಗೇ ನನ್ನನ್ನು ಒಮ್ಮೆ ದಿಟ್ಟಿಸಿದ ಸಾಹೇಬರು, 'ಏಯ್, ಎಲ್ಲಯ್ಯಾ ನಿನ್ನ ಕ್ಯಾಪು, ಗಾಡಿ ಮೇಲೆ ಕುಂತ್ಗಳುವಾಗ ನೋಡಿದ್ನಲ್ಲಯ್ಯಾ...' ಅಂತ ಸಖೇದಾಶ್ಚರ್ಯಗಳಿಂದ ಕೇಳಲಾಗಿ ನಾನು ಇದ್ದ ವಿಷಯವನ್ನು ನಿವೇದಿಸಿಕೊಳ್ಳಬೇಕಾಯಿತು.